# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

S.C.146/2022

C.W.10
P.W. 8

ದಿನಾಂಕಃ 29-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ಬ್ಲಾಮು ನಾಯಕ |
| ತಂದೆಯ ಹೆಸರು | ಃ ಲಕ್ಷ್ಮಣ ನಾಯಕ |
| ವಯಸ್ಸು | ಃ 30 ವರ್ಷ |
| ಉದ್ಯೋಗ | ಃ ವ್ಯವಸಾಯ / ಕೂಲಿ |
| ವಾಸ | ಃ ಕಮಲ ನಾಯಕ ತಾಂಡ್ಯ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಯು ಅಮಾತನ್ನು ಪಂಚನಾಮೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನುನಿಪಿ-5(ಬಿ) ಎಂದು ಗುರುತಿಸಲಾಯಿತು.

2) ಕಳೆದ 1 ವರ್ಷದ ಹಿಂದೆ ಮಧ್ಯಾಹ್ನದ ಸಮಯದಲ್ಲಿ ಪೊಲೀಸ್ ಇನ್ಸ್ ಪೆಕ್ಟರ್ ರವರ ಕಚೇರಿಯಲ್ಲಿ ನಾನು ಸಹಿ ಮಾಡಿರುತ್ತೇನೆ. ಮೃತ ರವಿಚಂದ್ರ ನಾಯಕ ಇವರ ಮಗನಾದ ಪಾಂಡುನಾಯಕ ಇವರ ರಕ್ತವನ್ನು ಸಂಗ್ರಹಿಸಿ ಇಟ್ಟು ಕೊಳ್ಳುವ ಸಮಯದಲ್ಲಿ ನಾನು ನಿಪಿ-5 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ರಕ್ತವನ್ನು ಸಂಗ್ರಹಿಸಿದ ಮಾದರಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಮು

ಮಾ-7 ಎಂದು ಗುರುತಿಸಲಾಯಿತು. ಮೃತ ರವಿಚಂದ್ರ ನಾಯಕ ನನ್ನ ದೊಡ್ಡಪ್ಪ ನ ಮಗ . ನನ್ನ ತಂದೆಯ ಹೆಸರು ಲಕ್ಷಣ ನಾಯಕ. ನನ್ನ ಅಜ್ಜನಿಗೆ 4 ಜನ ಮಕ್ಕಳು ಇದ್ದು ಅವರುಗಳೆಂದರೆ ರಾಗ್ಯ ನಾಯಕ, ಲಕ್ಷ್ಮ ನಾಯಕ , ಭೀಮನಾಯಕ, ಚಂದ್ರ ನಾಯಕ. ಮೃತ ರವಿಚಂದ್ರನಾಯಕ ರಾಗ್ಯ ನಾಯಕನ ಮಗ. ರವಿಚಂದ್ರನಾಯಕನಿಗೆ ಮದುವೆಯಾಗಿದ್ದು ಅವನ ಹೆಂಡತಿಯ ಹೆಸರು ಸಾವಿತ್ರಿಬಾಯಿ. ಸದರಿ ಸಾವಿತ್ರಿ ಬಾಯಿ ಈ ಪ್ರಕರಣದ 2 ನೇ ಆರೋಪಿಯಾಗಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯು ರಾಗ್ಯ ನಾಯಕ ಇವರ ಮಗ . ರಾಜ ನಾಯಕನ ಹೆಂಡತಿಯ ಹೆಸರು ಸಾವಿತ್ರಿ ಬಾಯಿ. ನಮ್ಮ ಅಜ್ಜನ ಹೆಸರಿನಲ್ಲಿರುವ ಜಮೀನನ್ನು ವಿಭಾಗ ಮಾಡಿಕೊಳ್ಳುವ ಸಮಯದಲ್ಲಿ ರಾಜನಾಯಕ ಮತ್ತು ರವಿಚಂದ್ರ ನಾಯಕ ಇವರಲ್ಲಿ ಕೇಳುತ್ತಿದ್ದರು. ಅದಕ್ಕೆ ರವಿಚಂದ್ರ ನಾಯಕರವರು ಸಹಿ ಬೇಕಾಗುತ್ತದೆ ಎಂದು ಕೇಳಿದರು, ಸದರಿ ರವಿಚಂದ್ರ ನಾಯಕ ಯುಗಾದಿ ಹಬ್ಬ ಮುಗಿಸಿಕೊಂಡು ಎಲ್ಲೋ ಹೋಗಿರುತ್ತಾರೆ ಇನ್ನು ಬಂದಿರುವುದಿಲ್ಲವೆಂದು ರವಿಚಂದ್ರನಾಯಕನ ಹೆಂಡತಿ ಮತ್ತು 1 ನೇ ಆರೋಪಿ ತಿಳಿಸಿರುತ್ತಾರೆ. ಹೀಗ್ಯೆ 2-3 ಭಾರಿ ಕೇಳಿದರು ಸಹ ಅವರು ರವಿಚಂದ್ರನ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ . ಕಮಲನಾಯಕ ಎಂಬುವರು ಮತ್ತು ಭೀಮನಾಯಕ, ಚಂದ್ರನಾಯಕ, ಸೇವಾನಾಯಕ 1 ಮತ್ತು 2 ನೇ ಆರೋಪಿಯನ್ನು ಪುನಃ ಈ ಬಗ್ಗೆ ವಿಚಾರಿಸಿದಾಗ ಆದರೂ ಸಹ ರವಿಚಂದ್ರನ ಬಗ್ಗೆ ಮಾಹಿತಿ ನೀಡಲಿಲ್ಲ. ನಂತರ ಅವರಿಬ್ಬರನ್ನು ಗದರಿಸಿ ಕೇಳಿದಾಗ ಸದರಿ ರವಿಚಂದ್ರ

ನಾಯಕನನ್ನು ನಾವುಗಳು ಕೊಲೆ ಮಾಡಿ ಪಾಯದಲ್ಲಿ ಹೂತು ಹಾಕಿರುವುದಾಗಿ ತಿಳಿಸಿರುತ್ತಾರೆ. ಪೊಲೀಸರು ಈ ಬಗ್ಗೆ ನನನ್ನು ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರು ಮಾಡಿದ ಪಂಚನಾಮೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರ ಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ಪಿ.ಪಿ. ರವರಿಂದಃ-</u>

3) ಮೃತ ರವಿಚಂದ್ರನಾಯಕರವರು ಮದುವೆಯಾದ ನಂತರ ಪ್ರತ್ಯೇಕವಾಗಿ ಮನೆ ಮಾಡಿಕೊಂಡು ವಾಸವಾಗಿದ್ದರು ಅಂದರೆ ಸರಿ . 1 ನೇ ಆರೋಪಿಯ ಹೆಂಡತಿಯ ಹೆಸರು ಶ್ರಾವಂತಿ ಬಾಯಿ ಅಂದರೆ ಸರಿ . 1 ನೇ ಆರೋಪಿಯು ತನ್ನ ಹೆಂಡತಿಯನ್ನು ಕೊಲೆ ಮಾಡಿ ಜೈಲಿಗ ಹೋಗಿ ನಂತರ ಬಿಡುಗಡೆಯಾಗಿ ಬಂದಿದ್ದ ಅಂದರೆ ಸರಿ . ನನ್ನ ತಾತ ಮೃತಪಟ್ಟ ನಂತರ ನಮ್ಮ ತಾತನ ಹೆಸರಿನಲ್ಲಿ ಇದ್ದ 25 ಎಕರೆ ಜಮೀನು ನನ್ನ ಅಜ್ಜಿ ಮಂಗಳ ಬಾಯಿಯ ಹೆಸರಿನಲ್ಲಿ ಖಾತೆಯಾಗಿತ್ತು

ಅಂದರೆಸರಿ. ತದನಂತರ ನನ್ನ ತಂದೆ ಮತ್ತು ಅಣ್ಣ ತಮ್ಮಂದಿರು ಸೇರಿ ಭಾಗ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದರು ಅಂದರೆ ಸರಿ . ಸದರಿ ವಿಚಾರವಾಗಿ ಸೇವಾನಾಯಕ ಓಡಾಡುತ್ತಿದ್ದ ಅಂದರೆ ಸರಿ . ಈ ವ್ಯವಹಾರಕ್ಕೆ ಮೃತ ರವಿಚಂದ್ರರವರ ಸಹಿ ಬೇಕಾಗುತ್ತದೆ ಎಂದು ಸೇವಾಯಕ ರಾಜನಾಯಕನಿಗೆ ತಿಳಿಸಿದ್ದರು ಅಂದರೆ ಸರಿ , ಈ ಸಂಬಂದ ನಾವೆಲ್ಲರೂ ಸೇರಿ 2 ನೇ ಆರೋಪಿಯನ್ನು ರವಿಚಂದ್ರ ನಾಯಕ ಎಲ್ಲಿ ಹೋಗಿದ್ದಾರೆದು ಕೇಳುತ್ತಿದ್ದೇವು ಅಂದರೆ ಸರಿ . ಆಗ 2 ನೇ ಆರೋಪಿ ಏನೂ ಹೇಳದ ಕಾರಣ 1 ನೇ ಆರೋಪಿಯನ್ನು ವಿಚಾರಿಸಿದೆವು ಅಂದರೆ ಸರಿ . ಆದರೂ ಸಹ 1 ಮತ್ತು 2 ನೇ ಆರೋಪಿಗಳು ಯಾವುದೇ ಮಾಹಿತಿಯನ್ನು ನಮಗೆ ನೀಡುತ್ತಿರಲಿಲ್ಲ ಅಂದರೆ ಸರಿ . ರವಿಚಂದ್ರ ನಾಯಕರವರು ತೀರಿಹೋಗಿರುತ್ತಾರೆ ಎಂದು ನಾವು ತಿಳಿದಿದ್ದೇವು ಅಂದರೆ ಸರಿಯಲ್ಲ. ನಂತರ ಗ್ರಾಮಸ್ಥರು 1 ಮತ್ತು 2 ನೇ ಆರೋಪಿಗಳ ಮಧ್ಯೆ ಆಕ್ರಮ ಸಂಬಂದ ವಿದ್ದ ಕಾರಣ ಮತ್ತು ಮೃತ ರವಿಚಂದ್ರ ನನ್ನು 2 ನೇ ಆರೋಪಿಗೆ ಯಾವಾಗಲೂ ಸಂಸಾರದ ವಿಚಾರದಲ್ಲಿ ಗಲಾಟೆ ಮಾಡುತ್ತಿದ್ದು ಮತ್ತು ರಾಜನಾಯಕನ ಸಂಬಂದವನ್ನು ವಿರೋಧಿಸುತ್ತಿದ್ದನು ಆದ ಕಾರಣ 1 ಮತ್ತು 2 ನೇ ಆರೋಪಿಗಳು ಸೇರಿ ಮೃತ ರವಿಚಂದ್ರನಾಯಕನನ್ನು ಕೊಲೆ ಮಾಡಿರಬಹುದು ಎಂದು ಗ್ರಾಮಸ್ಥರು ಅನುಮಾನಿಸಿದಾಗ , ನಂತರ ಈ ಬಗ್ಗೆ ದೂರು ದಾಖಲು ಆಯಿತು ಅಂದರೆ ಸರಿ . 1 ನೇ ಆರೋಪಿಯು ಮೃತ ರವಿಚಂದ್ರನಿಗೆ ಕೆನ್ನೆಗೆ ಕೈಯಿಂದ ಹೊಡೆದು ಆತ ಕೆಳಗೆ ಬಿದ್ದಾಗ 1 ನೇ ಆರೋಪಿಯು ಕುತ್ತಿಗೆಯ ಮೇಲೆ ಕಾಲಿಟ್ಟು ತುಳಿದು ಸಾಯಿಸಿದನು, ನಂತರ ಆತನ ಶವವನ್ನು ಮನೆಯ ಸಮೀಪದಲ್ಲಿರುವ

ಗುಂಡಿಯಲ್ಲಿ ಹೂತಿರುತ್ತೇನೆಂದು 2 ನೇ ಆರೋಪಿ ನನಗೆ ತಿಳಿಸಿದಳು ಅಂದರೆ ಸರಿ . ಈ ವಿಚಾರವಾಗಿ ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಅಂದರೆ ಸ ರಿ . ಸಾಕ್ಷಿಯು ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಸಿಡಿಸಿ ವಕೀಲರಿಂದಃ

4) ಪೊಲೀಸರ ಮುಂದೆ ಒಂದು ಭಾರಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ತದನಂತರ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ . ಪೊಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ . ದಿ 01-06-22 ರಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸೇವಾನಾಯಕ ನನ್ನ ಚಿಕ್ಕಪ್ಪ ನಿಗೂ ಮತ್ತು 1 ನೇ ಆರೋಪಿಗೂ ಜಮೀನಿನ ವಿಚಾರವಾಗಿ ಮನಸ್ತಾಪವಿತ್ತು ಅಂದರೆ ಸರಿಯಲ್ಲ. ನಮ್ಮ ನಮ್ಮ ಭಾಗಕ್ಕೆ ಬಂದ ಜಮೀನುಗಳನ್ನು ನಾವು ಮಳೆಬಂದಾಗ ವ್ಯವಸಾಯ ಮಾಡುತ್ತೇವೆ. ನಮ್ಮ ತಾಂಡ್ಯದಲ್ಲಿ ಸುಮಾರು150 ಮನೆಗಳಿದ್ದು ಎಲ್ಲರುನಮ್ಮ ಜನಾಂಗದವರು . ಕೆಲವು ಮನೆಗಳು ಹತ್ತಿರ ಇದ್ದು , ಕೆಲವು ಮನೆಗಳು ದೂರ ದೂರ ಇರುತ್ತದೆ. ಬೇಸಿಗೆಯಲ್ಲಿ ಎಲ್ಲರೂ ಮನೆಯ ಬಾಗಿಲಿನಲ್ಲಿ ಮಲಗುತ್ತಾರೆ ಅಂದರೆ ಸರಿಯಲ್ಲ. ಫ್ಯಾನ್ ಇರುವುದರಿಂದ ಎಲ್ಲರು ಒಳಗೆ ಮಲಗುತ್ತಾರೆ. ಫ್ಯಾನ್ ಇಲ್ಲದವರು ಹೊರಗೆ ಸಹ ಮಲಗಬಹುದು. ನಮ್ಮ ಊರಿನಲ್ಲಿ ಸುಮಾರು ಕ್ರಿಮಿನಲ್ ಪ್ರಕರಣವಾಗಿರುತ್ತದೆ ಅಂದರೆ ಗೊತ್ತಿಲ್ಲ ನಮ್ಮ ಊರಿನಲ್ಲಿ ವಿವಿದ ರಾಜಕೀಯ ಪಕ್ಷಗಳು ಇರಬಹುದು. 1 ನೇ ಆರೋಪಿತನು ತನ್ನ ಹೆಂಡತಿ ಕೊಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದ ಕಾರಣ ಆತನನ್ನು ಕಂಡರೆ ಯಾರಿಗೂ ಆಗುತ್ತಿರಲಿಲ್ಲ ಅಂದರೆ ಸರಿಯಲ್ಲ .ಸದರಿ ಪ್ರಕರಣದಲ್ಲಿ 1 ನೇ ಆರೋಪಿತನು

ಬಿಡುಗಡೆಯಾಗಿರುತ್ತಾನೆ ಅಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನನಗೂ ಸಹ ದ್ವೇಷವಿದೆ ಅಂದರೆ ಸರಿಯಲ್ಲ. ಜಮೀನಿನ ವಿಚಾರದಲ್ಲಿ ನನಗೂ ಮತ್ತು 1 ನೇ ಆರೋಪಿಗೂ ದ್ವೇಷವಿದೆ ಅಂದರೆ ಸರಿಯಲ್ಲ .

5) ಈ ವ್ಯವಹಾರಕ್ಕೆ ಮೃತ ರವಿಚಂದ್ರರವರ ಸಹಿ ಬೇಕಾಗುತ್ತದೆ ಎಂದು ಸೇವಾಯಕ ರಾಜನಾಯಕನಿಗೆ ತಿಳಿಸಿದ್ದರು ಅಂದರೆ ಸರಿಯೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ , ಈ ಸಂಬಂದ ನಾವೆಲ್ಲರೂ ಸೇರಿ 2 ನೇ ಆರೋಪಿಯನ್ನು ರವಿಚಂದ್ರ ನಾಯಕ ಎಲ್ಲಿ ಹೋಗಿದ್ದಾರೆದು ಕೇಳುತ್ತಿದ್ದೇವು ಅಂದರೆ ಸರಿ ಯೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಆಗ 2 ನೇ ಆರೋಪಿ ಏನೂ ಹೇಳದ ಕಾರಣ 1 ನೇ ಆರೋಪಿಯನ್ನು ವಿಚಾರಿಸಿದೆವು ಅಂದರೆ ಸರಿ ಯೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಆದರೂ ಸಹ 1 ಮತ್ತು 2 ನೇ ಆರೋಪಿಗಳು ಯಾವುದೇ ಮಾಹಿತಿಯನ್ನು ನಮಗೆ ನೀಡುತ್ತಿರಲಿಲ್ಲ ಅಂದರೆ ಸರಿ ಯೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಂತರ ಗ್ರಾಮಸ್ಥರು 1 ಮತ್ತು 2 ನೇ ಆರೋಪಿಗಳ ಮಧ್ಯೆ ಅಕ್ರಮ ಸಂಬಂದ ವಿದ್ದ ಕಾರಣ ಮತ್ತು ಮೃತ ರವಿಚಂದ್ರ ನನ್ನು 2 ನೇ ಆರೋಪಿಗೆ ಯಾವಾಗಲೂ ಸಂಸಾರದ ವಿಚಾರದಲ್ಲಿ ಗಲಾಟೆ ಮಾಡುತ್ತಿದ್ದು ಮತ್ತು ರಾಜನಾಯಕನ ಸಂಬಂದವನ್ನು ವಿರೋಧಿಸುತ್ತಿದ್ದನು ಆದ ಕಾರಣ 1 ಮತ್ತು 2 ನೇ ಆರೋಪಿಗಳು ಸೇರಿ ಮೃತ ರವಿಚಂದ್ರನಾಯಕನನ್ನು ಕೊಲೆ ಮಾಡಿರಬಹುದು ಎಂದು ಗ್ರಾಮಸ್ಥರು ಅನುಮಾನಿಸಿದಾಗ , ನಂತರ ಈ ಬಗ್ಗೆ ದೂರು ದಾಖಲು ಆಯಿತು ಅಂದರೆ ಸರಿಯೆಂದು ಸುಳ್ಳು ಹೇಳುತ್ತಿದ್ದೇನೆ

ಅಂದರೆ ಸರಿಯಲ್ಲ. 1 ನೇ ಆರೋಪಿಯು ಮೃತ ರವಿಚಂದ್ರನಿಗೆ ಕೆನ್ನೆಗೆ ಕೈಯಿಂದ ಹೊಡೆದು ಆತ ಕೆಳಗೆ ಬಿದ್ದಾಗ 1 ನೇ ಆರೋಪಿಯು ಕುತ್ತಿಗೆಯ ಮೇಲೆ ಕಾಲಿಟ್ಟು ತುಳಿದು ಸಾಯಿಸಿದನು, ನಂತರ ಆತನ ಶವವನ್ನು ಮನೆಯ ಸಮೀಪದಲ್ಲಿರುವ ಗುಂಡಿಯಲ್ಲಿ ಹೂತಿರುತ್ತೇನೆಂದು 2 ನೇ ಆರೋಪಿ ನನಗೆ ತಿಳಿಸಿದಳು ಅಂದರೆ ಸರಿ ಯೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾವು ಆಗಲಿ ಮತ್ತು ಗ್ರಾಮಸ್ಥರು ಆಗಲಿ 1 ನೇ ಆರೋಪಿ ಮತ್ತು 2 ನೇ ಆರೋಪಿಯನ್ನು ವಿಚಾರಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಮೃತನು ಸೆಂಟರಿಂಗ್ ಕೆಲಸ ಮಾಡುವ ಸಲುವಾಗಿ ಬೇರೆ ಬೇರೆ ಊರುಗಳಿಗೆ 15 ದಿನ ಹೋಗುತ್ತಿದ್ದ ಅಂದರೆ ಸರಿ . ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂ ದಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಆರೋಪಿ ಪರ ಶ್ರೀ ಎಂ ಎಸ್ ಯು ವಕೀಲರಿಂದಃ-**

ಮೇಲೆ ಮಾಡಿದ ಪಾಟೀ ಸವಾಲನ್ನೇ ಆಳ ವಡಿಸಿಕೊಂಡಿರುತ್ತಾರೆ.

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
ತುಮಕೂರು